ತಂತಿ ವಿಳಾಸ: ಯೂನಿರೆಜ್
ದೂರವಾಣಿ ಸಂಖ್ಯೆ: 2419677/2419361
ಫ್ಯಾಕ್ಸ್: 0821-2419363/2419301

e-mail: registrar@uni-mysore.ac.in
www.uni-mysore.ac.in

# ಮೈಸೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಸೌಧ
ಕ್ರಾಫರ್ಡ್‌ಭವನ, ಮೈಸೂರು,
ದಿನಾಂಕ 25.02.2016

ಸಂಖ್ಯೆ:ಎಸಿ6/159//2015-16

## ಸು ತ್ತೋ ಲೆ

ವಿಷಯ: **2015-16ನೇ** ಶೈಕ್ಷಣಿಕ ಸಾಲಿನ ಬಿ.ಇಡಿ. (**CBCS** ಮತ್ತು **CAGP**) ಶೈಕ್ಷಣಿಕ ವೇಳಾಪಟ್ಟಿಯ ಕಳುಹಿಸುವ ಬಗೆಗೆ.

ಉಲ್ಲೇಖ: ಡೀನರು, ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಇವರ ಪತ್ರ ಸಂಖ್ಯೆ: MG/EDN/540/2015-16 ದಿನಾಂಕ: 23.02.2016.

-:-

**2015-16ನೇ** ಶೈಕ್ಷಣಿಕ ಸಾಲಿನಲ್ಲಿ ಬಿ.ಇಡಿ. (**CBCS** ಮತ್ತು **CAGP**) ಕೋರ್ಸಿನ ಶೈಕ್ಷಣಿಕ ವೇಳಾಪಟ್ಟಿಯನ್ನು ಈ ಕೆಳಕಂಡಂತೆ ಪ್ರಕಟಿಸಲಾಗಿದೆ ಹಾಗೂ ಸದರಿ ವೇಳಾಪಟ್ಟಿಯನ್ನು ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ ಎಲ್ಲಾ ಬಿ.ಇಡಿ. ಕಾಲೇಜು ಪ್ರಾಂಶುಪಾಲರುಗಳ ಗಮನಕ್ಕೆ ತರಲಾಗಿದೆ.

**I SEMESTER (Duration: 100 days)**

| | |
|---|---|
| **Re-opening of I Semester** | **29th Feb. 2016 Monday** |
| **Term ends on** | **2nd July 2016 Saturday** |
| **University I Sem theory examination** | **11th July 2016 Monday** |

**II SEMESTER (Duration: 100 days)**

| | |
|---|---|
| **Commencement of II Semester** | **27th July 2016 Monday** |
| **Term ends on** | **3rd Dec. 2016 Saturday** |
| **University II Sem theory examination** | **13th Dec. 2016 Tuesday** |
| **Vacation** | **4th Dec. 2016 onwards** |

**ಸೂಚನೆ:** ಮೇಲೆ ನಮೂದಿಸಿರುವ ದಿನಗಳಲ್ಲಿ ಸಾರ್ವತ್ರಿಕ ರಜೆ ಇದ್ದಲ್ಲಿ/ಘೋಷಿಸಿದ್ದಲ್ಲಿ ಕಾರ್ಯಕ್ರಮಗಳು ಮುಂದಿನ ಕೆಲಸದ ದಿನ ಪ್ರಾರಂಭವಾಗುತ್ತವೆಂದು ತಿಳಿಯುವುದು.

**ವಿಶೇಷ ಸೂಚನೆಗಳು:**

1. ವಿಶ್ವವಿದ್ಯಾನಿಲಯದ ವಿನಿಯಮಗಳಿಗೆ ಅನುಗುಣವಾಗಿ ಇರುವ ಹಾಜರಾತಿ ನಿರ್ಬಂಧಗಳನ್ನು ಅಭ್ಯರ್ಥಿಗಳ ಗಮನಕ್ಕೆ ತರತಕ್ಕದ್ದು. ಒಂದು ವೇಳೆ ನಿಗದಿತ ಅವಧಿಯಲ್ಲಿ ಪಾಠ ಪ್ರವಚನಗಳನ್ನು ಮುಗಿಸಲು ಸಾಧ್ಯವಾಗದಿದ್ದಲ್ಲಿ ರಜಾ ದಿನಗಳಂದು ವಿಶೇಷ ತರಗತಿಗಳನ್ನು ಏರ್ಪಡಿಸುವುದರ ಮೂಲಕ ಅವುಗಳನ್ನು ಮುಗಿಸತಕ್ಕದ್ದು.

2. ಸರ್ಕಾರ ತನ್ನ ಪತ್ರ ಕ್ರಮಾಂಕ **ಇಡಿ 10 ಯುಬಿ 99 ಬೆಂಗಳೂರು ದಿನಾಂಕ 3.6.1999 ರಂದು ಪ್ರಕಟಿಸಿದ್ದ 1999ರ** ಬಿ.ಇಡಿ. ಪ್ರವೇಶಾತಿ ನಿಯಮಾವಳಿ ಅನಂತರ ಪ್ರಕಟಿಸಿರುವ ಅಧಿಸೂಚನೆಗಳು/ಸುತ್ತೋಲೆಗಳು ಮತ್ತು ವಿಶ್ವವಿದ್ಯಾನಿಲಯದ ವಿನಿಯಮ/ನಿಯಮಗಳನ್ನು ಪ್ರವೇಶಾತಿ ಹಂತದಲ್ಲಿ ಕಡ್ಡಾಯವಾಗಿ ಪಾಲಿಸತಕ್ಕದ್ದು.

3. ಅರ್ಹರಾದ ಅಭ್ಯರ್ಥಿಗಳು ಮಾತ್ರ ಪ್ರವೇಶ ಪಡೆದಿದ್ದಾರೆಂದು ಖಚಿತಪಡಿಸಿಕೊಳ್ಳುವ ಹೊಣೆ ಸಂಸ್ಥೆಯ ಮುಖ್ಯಸ್ಥರದ್ದು. ಅನರ್ಹ ಅಭ್ಯರ್ಥಿಗಳ ಪ್ರವೇಶಕ್ಕೆ ವಿಶ್ವವಿದ್ಯಾನಿಲಯವು ಯಾವುದೇ ಕಾರಣಕ್ಕೂ ಜವಾಬ್ದಾರಿಯಾಗುವುದಿಲ್ಲ.

4. ಹೊರ ರಾಜ್ಯದ ವಿಶ್ವವಿದ್ಯಾನಿಲಯದ ಅಭ್ಯರ್ಥಿಗಳ ಪ್ರವೇಶವನ್ನು ವಿಶ್ವವಿದ್ಯಾನಿಲಯದಿಂದ ಅರ್ಹತಾ ಪತ್ರ ಪಡೆದುಕೊಂಡ ಬಳಿಕವೇ ಮಾಡಬೇಕು.

5. ಸಂಸ್ಥೆಯ ಮುಖ್ಯಸ್ಥರು ಸರ್ಕಾರ ನಿಗದಿಪಡಿಸಿರುವ ಪ್ರವೇಶ ಮಿತಿ, ಮೀಸಲಾತಿ ನಿಯಮಗಳು ಹಾಗೂ ಇನ್ನಿತರ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

6. ಕೇಂದ್ರೀಕೃತ ದಾಖಲಾತಿ ಘಟಕದ ಮೂಲಕ ಆಯ್ಕೆಯಾದ ಅಭ್ಯರ್ಥಿಗಳು ಮತ್ತು ಆಡಳಿತ ಮಂಡಳಿಯಿಂದ ಆಯ್ಕೆಯಾದ ಅಭ್ಯರ್ಥಿಗಳು ದಾಖಲಾಗಲು ಕಡೆಯ ದಿನಾಂಕ **29.02.2016.**

7. ಪ್ರವೇಶ ನಡೆದ ಅಭ್ಯರ್ಥಿಗಳ ಹೆಸರು ಮತ್ತು ಪದವಿ ಕೋರ್ಸಿನಲ್ಲಿ ಅಭ್ಯಾಸ ಮಾಡಿರುವ ಐಚ್ಛಿಕ ವಿಷಯಗಳು ಇತ್ಯಾದಿ ವಿವರಗಳನ್ನೊಳಗೊಂಡ ಪ್ರವೇಶಾತಿ ಪಟ್ಟಿಗಳನ್ನು ನಿಗದಿತ ನಮೂನೆಯಲ್ಲಿ (ತ್ರಿಪ್ರತಿಗಳಲ್ಲಿ) ಹಾಗೂ ಎಲ್ಲಾ ಮೂಲ ದಾಖಲಾತಿಗಳನ್ನು ದಿನಾಂಕ **26.03.2016ರ** ಒಳಗೆ ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರಿಗೆ ತಲುಪುವಂತೆ ಕಳುಹಿಸತಕ್ಕದ್ದು.

ಪ್ರವೇಶಾತಿ ಪಟ್ಟಿಯಲ್ಲಿ ಮೊದಲು ಸರ್ಕಾರಿ ಕೋಟಾದಲ್ಲಿ ಆಯ್ಕೆಯಾಗಿರುವ ಅಭ್ಯರ್ಥಿಗಳ ಹೆಸರುಗಳನ್ನು ಮತ್ತು ಅನಂತರ ಆಡಳಿತ ಮಂಡಳಿಯ ಮೂಲಕ ಆಯ್ಕೆಯಾದ ಅಭ್ಯರ್ಥಿಗಳ ಹೆಸರುಗಳನ್ನು ಅನುಕ್ರಮ ಸಂಖ್ಯೆಯಲ್ಲಿ ನಮೂದಿಸತಕ್ಕದ್ದು. ಬಿ.ಇಡಿ. ಶಿಕ್ಷಣದ ಪ್ರವೇಶಾತಿ ಸಂಬಂಧ ಸರ್ಕಾರ ಆಯಾಯ ಕಾಲೇಜುಗಳಿಗೆ ಮಾತ್ರ ಅನ್ವಯಿಸುವಂತೆ ಕಳುಹಿಸಿರುವ ಆಯ್ಕೆ ಪಟ್ಟಿ, ಸುತ್ತೋಲೆ, ಮಾರ್ಗದರ್ಶಿನಿ ಸೂಚಿ, ವಿನಾಯಿತಿ ಸೂಚಿ ಇತ್ಯಾದಿ ದಾಖಲಾತಿಗಳ ಜೆರಾಕ್ಸ್ ಪ್ರತಿಗಳನ್ನು ಪ್ರವೇಶಾತಿ ಪಟ್ಟಿಯೊಡನೆ ತಪ್ಪದೇ ಈ ಕಛೇರಿಗೆ ಕಳುಹಿಸತಕ್ಕದ್ದು.

**ದಿನಾಂಕ 26.03.2016ರ ನಂತರ ಬರುವ ಪ್ರವೇಶಾತಿ ಅಭ್ಯರ್ಥನಾ ಪಟ್ಟಿಗಳನ್ನು ಸ್ವೀಕರಿಸುವುದಿಲ್ಲ.**

**ವಿಶ್ವವಿದ್ಯಾನಿಲಯವು ನಿಗಧಿಪಡಿಸಿರುವ ಶುಲ್ಕಗಳನ್ನು ಸಮರ್ಪಕವಾಗಿ ಪಾವತಿಸತಕ್ಕದ್ದು.**

**ಕುಲಸಚಿವರಿಂದ ಕರಡು ಅನುಮೋದಿಸಿದೆ**

ಉಪಕುಲಸಚಿವ(ಶೈಕ್ಷಣಿಕ)

25/2/16 25/2/16

ಇವರಿಗೆ:

1. ಎಲ್ಲಾ ಬಿ.ಇಡಿ. ಕಾಲೇಜುಗಳ ಪ್ರಾಂಶುಪಾಲರುಗಳಿಗೆ
2. ಕುಲಸಚಿವ (ಪರೀಕ್ಷಾಂಗ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು – ಅವರಿಗೆ ಬಿ.ಇಡಿ. ಪದವಿ ಕೋರ್ಸ್‌ನ ವಾರ್ಷಿಕ/ಸಪ್ಲಿಮೆಂಟರಿ ಪರೀಕ್ಷೆಗಳು ನಡೆಯುವ ಬಗ್ಗೆ ನಿಮ್ಮ ವತಿಯಿಂದಲೇ ದಿನಾಂಕಗಳನ್ನು ಸೂಚಿಸಿ ಕ್ರಮ ಕೈಗೊಳ್ಳಬೇಕೆಂದು ಕೋರಲಾಗಿದೆ.
3. ಕುಲಸಚಿವರು, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳೂರು, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು, ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ, ಗುಲ್ಬರ್ಗ ವಿಶ್ವವಿದ್ಯಾನಿಲಯ, ಗುಲ್ಬರ್ಗ, ಕುವೆಂಪು ವಿಶ್ವವಿದ್ಯಾನಿಲಯ, ಶಿವಮೊಗ್ಗ
4. ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಡಾ.ಅಂಬೇಡ್ಕರ್ ಕಟ್ಟಡ, ಡಾ.ಅಂಬೇಡ್ಕರ್ ರಸ್ತೆ, ಬೆಂಗಳೂರು
5. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು
6. ಡೀನರು, ಶಿಕ್ಷಣ ನಿಕಾಯ, ದೈಹಿಕ ಶಿಕ್ಷಣ ಅಧ್ಯಯನ ವಿಭಾಗ, ಮೈವಿವಿ, ಮೈಸೂರು
7. ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ಸು. ಎಸಿ428